# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993 ಇ-ಮೇಲ್: regphdku@gmail.com, ವೆಬ್‌ಸೈಟ್: www.kuvempu.ac.in


**Re-Accredited by NAAC with 'A' Grade, Ranked 73rd Place in NIRF- 2019 and Secured 45th Place in SCIMAGO Institutional Rankings**

ಸಂಖ್ಯೆ: ಕುವಿ/ಪವಿ/ಪಿಹೆಚ್.ಡಿ-2/9092 /2020-21 ದಿನಾಂಕ: 09-03-2021.

## ಅಧಿಸೂಚನೆ

ವಿಷಯ: ಮಾರ್ಚ್ - 2021ರಲ್ಲಿ ಜರುಗಲಿರುವ ಪಿಹೆಚ್.ಡಿ., ಕೋರ್ಸ್‌ವರ್ಕ್ ಪರೀಕ್ಷೆಯ ಕುರಿತು.

ಉಲ್ಲೇಖ:ಕುವಿ:ಪವಿ:ಪಿಹೆಚ್.ಡಿ-2:8175:2020-21, ದಿನಾಂಕ:27.01.2021.

*****

ಮಾರ್ಚ್ - 2021ರಲ್ಲಿ ನಡೆಸಲಾಗುವ ಪಿಹೆಚ್.ಡಿ., ಕೋರ್ಸ್‌ವರ್ಕ್ ಪರೀಕ್ಷೆಗಳಿಗೆ ಆಯಾ ವಿಭಾಗಗಳಲ್ಲಿ ಸಂಬಂಧಿಸಿದ ವಿಷಯಗಳಲ್ಲಿ ಸಂಶೋಧನಾರ್ಥಿಗಳಾಗಿರುವ ಅರ್ಹ ಅಭ್ಯರ್ಥಿಗಳಿಂದ ದಿನಾಂಕ:15-02-2021ರೊಳಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ, ಕೆಲವು ವಿದ್ಯಾರ್ಥಿಗಳು ಕಾರಣಾಂತರದಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇರುವುದರಿಂದ ಅರ್ಜಿ ಸಲ್ಲಿಸಲು ಅವಕಾಶ ಕೋರಿರುತ್ತಾರೆ. ಮಾನ್ಯ ಕುಲಪತಿಗಳು ರೂ.500-00 (ಐದು ನೂರು ರೂಪಾಯಿಗಳು) ವಿಶೇಷ ದಂಡಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ:14-03-2021ರ ಸಂಜೆ 5.00 ಗಂಟೆಯೊಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

| ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ | | |
|---|---|---|
| 01 | ಸಾಮಾನ್ಯ ಅಭ್ಯರ್ಥಿಗಳಿಗೆ | 1980/-<br>(ರೂ. 500-00 ವಿಶೇಷ ದಂಡದೊಂದಿಗೆ) |
| 02 | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1 ರ ಅಭ್ಯರ್ಥಿಗಳಿಗೆ | 700/-<br>(ರೂ. 500-00 ವಿಶೇಷ ದಂಡದೊಂದಿಗೆ) |

### *ಅಭ್ಯರ್ಥಿಗಳಿಗೆ ಸೂಚನೆ:*

1. ಅಭ್ಯರ್ಥಿಗಳು ಕುವೆಂಪು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ 'Ph.D., Course online registration' ಲಿಂಕ್‌ನ ಮೂಲಕ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು.
2. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿದ ವಿವರದೊಂದಿಗೆ, ಮುದ್ರಿತ ಅರ್ಜಿಯನ್ನು ಸಂಬಂಧಿಸಿದ ವಿಭಾಗದ ಮೂಲಕ ಪರೀಕ್ಷಾಂಗಕ್ಕೆ ಸಲ್ಲಿಸುವುದು.
3. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್ಸಿ/ಎಸ್.ಟಿ / ಪ್ರವರ್ಗ-1 ಅಭ್ಯರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ವಿನಾಯಿತಿ ಬಯಸುವ ಅಭ್ಯರ್ಥಿಗಳು ಆದಾಯ ದೃಢೀಕರಣ ಪತ್ರವನ್ನು ಸಲ್ಲಿಸುವುದು.
4. ನಿಗದಿತ ದಿನಾಂಕದ ನಂತರ ಪಾವತಿಸಲಾದ ಶುಲ್ಕವನ್ನಾಗಲಿ ಅಥವಾ ಅರ್ಜಿಯನ್ನಾಗಲಿ ಪರಿಗಣಿಸಲಾಗುವುದಿಲ್ಲ.
5. ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.

---2

**<u>ವಿಭಾಗದ ಅಧ್ಯಕ್ಷರಿಗೆ ಸೂಚನೆ:</u>**

1. ಆನ್‌ಲೈನ್ ಮೂಲಕ ನಿಗದಿತ ಶುಲ್ಕದೊಂದಿಗೆ ಅಭ್ಯರ್ಥಿಗಳು ಸಲ್ಲಿಸುವ ಅರ್ಜಿಗಳನ್ನು ಕ್ರೋಢೀಕರಿಸಿ, ಕ್ರೋಢೀಕೃತ ಪಟ್ಟಿಯನ್ನು ದೃಢೀಕರಣದೊಂದಿಗೆ ಪರೀಕ್ಷಾ ವಿಭಾಗಕ್ಕೆ ದಿನಾಂಕ: 13-03-2021ರಂದು ಸಲ್ಲಿಸಲು ಸೂಚಿಸಲಾಗಿದೆ.
2. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್ಸಿ/ಎಸ್.ಟಿ / ಪ್ರವರ್ಗ-1 ಅಭ್ಯರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.
3. ಆಯಾ ವಿಷಯಗಳ ಪರೀಕ್ಷಾ ಮಂಡಳಿ ಅಧ್ಯಕ್ಷರು ಪ್ರಶ್ನೆಪತ್ರಿಕೆಗಳ ಬೇಡಿಕೆಯನ್ನು ದಿ:20-02-2021 ರ ಒಳಗಾಗಿ ಡಾ. ಬಿ. ಜೆ. ಗಿರೀಶ್, ಉಪಕುಲಸಚಿವರು (ಪರೀಕ್ಷಾಂಗ) - ಇವರಿಗೆ ತಲುಪಿಸಲು ಕ್ರಮ ತೆಗೆದುಕೊಳ್ಳುವುದು.
4. ಆಂತರಿಕ ಅಂಕಗಳನ್ನು ಸೈದ್ಧಾಂತಿಕ ಪರೀಕ್ಷಾ ಪೂರ್ವದಲ್ಲಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೆ ಕಾರಣಕ್ಕೂ ಪರಿಗಣಿಸುವುದಿಲ್ಲ.

ಕುಲಸಚಿವ (ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಇವರಿಗೆ,

1. ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು/ಸಂಯೋಜನಾಧಿಕಾರಿಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಕಡೂರು.
2. ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕಡೂರು/ಚಿಕ್ಕಮಗಳೂರು.
3. ಅಧ್ಯಕ್ಷರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ, ಸಹ್ಯಾದ್ರಿ ಕಾಲೇಜು, ಆವರಣ, ಶಿವಮೊಗ್ಗ.
4. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಉರ್ದು ಅಧ್ಯಯನ ವಿಭಾಗ, ಸಹ್ಯಾದ್ರಿ ಕಾಲೇಜು, ಆವರಣ, ಶಿವಮೊಗ್ಗ.
5. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.
6. ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.
7. ಪ್ರಾಂಶುಪಾಲರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.
8. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
10. ಆಪ್ತಶಾಖೆ, ಮಾನ್ಯಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
11. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
12. ಶಾಖಾಧಿಕಾರಿಗಳು/ಕಂಪ್ಯೂಟರ್ ಪ್ರೋಗ್ರಾಮರ್, ಪರೀಕ್ಷಾಂಗ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
13. ಮೆ: ಲಾಜಿಸಸ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
14. ವಿಷಯ ನಿರ್ವಾಹಕರು: ಲೇಖನ ಸಾಮಗ್ರಿ/ ರಹಸ್ಯ ಪತ್ರಿಕೆ ವಿಭಾಗ, ಪರೀಕ್ಷಾಂಗ, ಪರೀಕ್ಷಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
15. ಕಛೇರಿ ಪ್ರತಿ.